| | | | | |
|---|---|---|---|---|
| 3 | ಎನ್ವೈಆರ್ ಲೇಔಟ್ ನ ನೀರು ಸರಬರಾಜಿನ ಬಗ್ಗೆ ಕೇಳಲಾಯಿತು. | ಶ್ರೀ ರಮೇಶ್ | ಇದರ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರೊಂದಿಗೆ ಸ್ಥಳದಲ್ಲಿಯೇ ಚರ್ಚಿಸಿ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 4 | ಅಬ್ಬಿಗೆರೆ ಸುತ್ತಮುತ್ತ ನೀರಿನ ಟೆಸ್ಟಿಂಗ್‌ಅನ್ನು ಯಾವಾಗ ಮಾಡಿಸಿಕೊಡುವುದಾಗಿ ಕೇಳಿದರು | ಶ್ರೀ ರಾಮಾಂಜಿನಪ್ಪ | ಅಬ್ಬಿಗೆರೆ ಸುತ್ತಮುತ್ತ ನೀರಿನ ಟೆಸ್ಟಿಂಗ್‌ಅನ್ನು ಮಂಗಳವಾರ ತಪ್ಪಿದ್ದಲ್ಲಿ ಶುಕ್ರವಾರ ಮಾಡಿಸಿಕೊಡುವುದಾಗಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 5 | ಕಮ್ಮಗೊಂಡನಹಳ್ಳಿ ಸ್ಲಂಗೆ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳಿದರು | ಶ್ರೀ ದೇವೇಗೌಡ್ರು | ಈ ವಿಷಯವಾಗಿ ಶಾಸಕರೊಂದಿಗೆ ಚರ್ಚಿಸಿ ತಿಳಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 6 | ಮೇದರಹಳ್ಳಿ ಕಾಲೋನಿಯಲ್ಲಿ ಸ್ಯಾನಿಟರಿ ಲೈನ್ ಆಗಿಲ್ಲವೆಂದು ಕೇಳಿದರು | ಶ್ರೀ ಸೋಮಶೇಖರ್ | ಈ ವಿಷಯವಾಗಿ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ತಿಳಿಸುವುದಾಗಿ ಹೇಳಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |
| 7 | ಅಬ್ಬಿಗೆರೆ ಸ್ಮಶಾಣಕ್ಕೆ ಕಲ್ವರ್ಟ್ ಹಾಗೂ ಬ್ರಿಡ್ಜ್ ಅನ್ನು ಹಾಕಿಸಿಕೊಡಬೇಕೆಂದು ಕೇಳಲಾಯಿತು. | ಶ್ರೀ ರಾಮಾಂಜಿನಪ್ಪ | ಈ ವಿಷಯವಾಗಿ ಎಂ.ಓ.ಹೆಚ್ ರವರಿಗೆ ತಿಳಿಸುವುದಾಗಿ ತಿಳಿಸಲಾಯಿತು. | ವೈದ್ಯಾಧಿಕಾರಿಗಳು ದಾಸರಹಳ್ಳಿ ವಿಭಾಗ |
| 8 | ಸ್ಮಶಾಣಗಳಿಗೆ ಖಾಯಂ ಆಗಿ ಕಾವಲುಗಾರರು ಇಲ್ಲದಿರುವುದನ್ನು ಪ್ರಶ್ನಿಸಲಾಯಿತು | ಶ್ರೀ ಸೋಮಶೇಖರ್ | ಈ ವಿಷಯವಾಗಿ ಎಂ.ಓ.ಹೆಚ್ ರವರಿಗೆ ತಿಳಿಸುವುದಾಗಿ ತಿಳಿಸಲಾಯಿತು. | ವೈದ್ಯಾಧಿಕಾರಿಗಳು ದಾಸರಹಳ್ಳಿ ವಿಭಾಗ |
| 9 | ಪಿಳ್ಳಪ್ಪ ವೃತ್ತ ಹಾಗೂ ವೈಮ್ಯಾಕ್ ವೃತ್ತದಲ್ಲಿ ಹುಡುಗರು ವೀಲಿಂಗ್ ಮಾಡುತ್ತಿರುವುದಾಗಿ ದೂರು ಹೇಳಿದರು | ಶ್ರೀ ರಾಮಾಂಜಿನಪ್ಪ | ಸ್ಥಳದಲ್ಲಿಯೇ ಹಾಜರಿದ್ದ ಟ್ರಾಫಿಕ್ ಎಸ್.ಐ. ರವರು ಈ ವಿಷಯವಾಗಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. | ಟ್ರಾಫಿಕ್ ಪೋಲೀಸ್ ಠಾಣೆ |
| 10 | ವಿನಾಯಕ ಲೇಔಟ್ ಮತ್ತು ಆರ್.ಆರ್. ಕಾಲೇಜ್ ರಸ್ತೆಗಳಿಗೆ ಸೊಳ್ಳೆ ಹಾಗೂ ಇತರೆ ಔಷಧಿಗಳನ್ನು ಸಿಂಪಡಿಸಬೇಕೆಂದು ಕೋರಿದರು. | ಶ್ರೀ ಸೋಮಶೇಖರ್ | ಈ ವಿಷಯವಾಗಿ ಸ್ಥಳದಲ್ಲಿಯೇ ಇದ್ದ ಆರೋಗ್ಯ ಅಧಿಕಾರಿಗಳಿಗೆ ತಿಳಿಸಲಾಯಿತು. | ವೈದ್ಯಾಧಿಕಾರಿಗಳು ದಾಸರಹಳ್ಳಿ ವಿಭಾಗ |
| 11 | ವಾರ್ಡ್‌ನಲ್ಲಿ ಖಾಲಿ ಇರುವ ಸೈಟ್‌ಗಳಲ್ಲಿ ಘನತ್ಯಾಜ್ಯವನ್ನು ಸುರಿಯುತ್ತಿರುವುದಾಗಿ ದೂರು ನೀಡಿದರು. | ಸಾರ್ವಜನಿಕರು | ಈ ವಿಷಯವಾಗಿ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ದಂಡ ವಿಧಿಸಲು ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ |
| 12 | ಬೆಸ್ಕಾಂನ ಅಧಿಕಾರಿಗಳು ವಾರ್ಡ್ ಸಭೆಗೆ ಹಾಜರಾಗುತ್ತಿಲ್ಲವೆಂದು ದೂರು ನೀಡಿದರು. | ವಾರ್ಡ್ ಸಭೆಯ ಸದಸ್ಯರು | ಈ ವಿಷಯವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದಾಗಿ ತಿಳಿಸಲಾಯಿತು, | ಸಹಾಯಕ ಕಾರ್ಯಪಾಲಕ ಅಭಿಯಂತರರು ಶೆಟ್ಟಿಹಳ್ಳಿ ಉಪವಿಭಾಗ |

**2) ವಾರ್ಡ್ ವ್ಯಾಪ್ತಿಯಲ್ಲಿನ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವ ವಿಚಾರ.**

ಘನತ್ಯಾಜ್ಯ ನಿರ್ವಹಣೆ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಹಿರಿಯ ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.

1. ಮನೆ ಮನೆಗಳಿಂದ ಹಾಗೂ ವಾಣಿಜ್ಯ ಸಂಕೀರ್ಣಗಳಿಂದ ಹಸಿಕಸ, ಒಣಕಸ ಮತ್ತು ಸ್ಯಾನಿಟರಿ ತ್ಯಾಜ್ಯಗಳನ್ನು ಬೇರ್ಪಡಿಸಿ ತೆಗದುಕೊಳ್ಳುವುದನ್ನು ಪರಿಶೀಲಿಸುವುದು.
2. ತ್ಯಾಜ್ಯ ವಿಂಗಡಿಸದೆ ನೀಡುವುದು ಕಂಡು ಬಂದರೆ ಅಂತಹವರಿಗೆ ದಂಡ ವಿಧಿಸಲು ಸಂಬಂಧಪಟ್ಟ ಆರೋಗ್ಯ ಪರಿವೀಕ್ಷಕರಿಗೆ ಸೂಚನೆ ನೀಡುವುದು.

